**Com.O.S.** 90/2025

**PW-1**

**ಸಾಕ್ಷಿಯನ್ನು ದಿನಾಂಕ 19.2.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಬಿ.ಎಸ್ ವಕೀಲರಿಂದಃ**

ಪ್ರತಿವಾದಿ 2003 ರಿಂದ ಎ ಶೆಡ್ಯೂಲ್ ಆಸ್ತಿಯ ಪೈಕಿ 41*50 ಅಡಿ ಕಟ್ಟಡದಲ್ಲಿ ಬಾಡಿಗೆಗೆ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು 2011 ರಿಂದ 33*20 ಅಡಿ ಆರ್.ಸಿ.ಸಿ ಕಟ್ಟಡದಲ್ಲಿ ಬಾಡಿಗೆಗೆ ಇದ್ದಾರೆ. ಬಿ ಶೆಡ್ಯೂಲ್‌ನಲ್ಲಿ ಹೇಳಿರುವಂತೆ 15*80 ಅಡಿ ಅಳತೆಯ ಕಟ್ಟಡದ ಕುರಿತು ಅಗ್ರಿಮೆಂಟ್ ಆಗಿಲ್ಲ ಎಂದರೆ ನಿಜ. 2020 ರವರೆಗೆ ನನ್ನ ತಾತನೇ ಬಾಡಿಗೆ ಹಣ ಪಡೆದುಕೊಳ್ಳುತ್ತಿದ್ದರು ಎಂದರೆ ನಿಜ. ನನ್ನ ತಾತನ ಮರಣದ ಬಳಿಕ ನನ್ನ ತಾಯಿಯ ತಂಗಿ ಪರ್ಜಾನ್ ಎಂಬುವವರು ಬಾಡಿಗೆ ಹಣ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಪರ್ಜಾನ್ ಇವರಿಗೆ ಹಣದ ಅವಶ್ಯಕತೆ ಇದ್ದಾಗ ಅಡ್ವಾನ್ಸ ಬಾಡಿಗೆ ಎಂದು 2.40 ಲಕ್ಷ ಹಣವನ್ನು ಮೂರು ಕಂತುಗಳಲ್ಲಿ ಪ್ರತಿವಾದಿಯಿಂದ ಆರ್.ಟಿ.ಜಿ.ಎಸ್ ಮೂಲಕ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 5.12.2017 ರಂದು ನನ್ನ ತಾತ ಮೂರು ವರ್ಷದ ಅವಧಿಗೆ ಬಾಡಿಗೆ ಕರಾರು ಮಾಡಿಕೊಟ್ಟಿದ್ದರು ಎಂದರೆ ನಿಜ. ನನ್ನ ತಾತ ಸುಭಾಷನಗರದ ಮನೆಯ ಮೊದಲನೇ ಮಹಡಿ ಕಟ್ಟಲು ಹಣದ ಅವಶ್ಯಕತೆ ಇದೆ ಎಂದು ದಿನಾಂಕ 5.12.2018 ರಂದು ಪ್ರತಿವಾದಿಯಿಂದ 18 ಲಕ್ಷ ಹಣವನ್ನು ಹೆಚ್ಚುವರಿ ಅಡ್ವಾನ್ಸ ಹಣ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಆ ದಿನದಂದು 15 ವರ್ಷದ ಅವಧಿಗೆ ಹೊಸ ಅಗ್ರಿಮೆಂಟ್ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ತಾತನಿಗೆ ಒಟ್ಟು 26.50 ಲಕ್ಷ ಹಣವನ್ನು ಅಡ್ವಾನ್ಸ ಎಂದು ನೀಡಿದ್ದಾರೆ ಎಂದರೆ ಸರಿಯಲ್ಲ. ಈವತ್ತಿಗೂ ಪ್ರತಿವಾದಿಯಿಂದ ಯಾವುದೇ ಬಾಡಿಗೆ

ಹಣ ಬಾಕಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಪ್ರತಿ ತಿಂಗಳೂ ನಿಯಮಿತವಾಗಿ ಬಾಡಿಗೆ ಹಣ ನೀಡುತ್ತಿದ್ದರೂ ಸಹ ನನ್ನ ತಾಯಿ ಮತ್ತು ಅವರ ತಂಗಿಯರು ಆಗಾಗ ದಾವಆಸ್ತಿ ಬಳಿ ಹೋಗಿ ಖಾಲಿ ಮಾಡುವಂತೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಓ.ಎಸ್ 959/2023 ರಂತೆ ದಾವೆ ಹಾಕಿದ್ದಾರೆ ಎಂದರೆ ದಾವೆ ಹಾಕಿರುವುದು ನಿಜ. ಆ ದಾವೆ ಈಗಲೂ ಪೆಂಡಿಂಗ್ ಇದೆ ಎಂದರೆ ನಿಜ. ಪ್ರತಿವಾದಿಗೆ ಅಡ್ವಾನ್ಸ ಹಣವನ್ನು ವಾಪಸ್ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ದಿನಾಂಕ 5.12.2018 ರಂದು ಹೆಚ್ಚುವರಿ ಹಣ ಪಡೆದಿಲ್ಲ ಮತ್ತು ಅಗ್ರಿಮೆಂಟ್ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಮತ್ತು ಸುಳ್ಳು ಅರ್ಜಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಬ್ದುಲ್ ರೆಹ್ಮಾನ್ ನನ್ನ ತಾಯಿಯ ಸಹೋದರ ಎಂದರೆ ನಿಜ. ದಿನಾಂಕ 5.12.2018 ರ ಕರಾರುಪತ್ರಕ್ಕೆ ಅಬ್ದುಲ್ ರೆಹ್ಮಾನ್ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಆಸ್ತಿ ನಮ್ಮ ಸ್ವಂತ ಉಪಯೋಗಕ್ಕೆ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಕಾಲಕಾಲಕ್ಕೆ ಸರಿಯಾಗಿ ಬಾಡಿಗೆ ಪಾವತಿ ಮಾಡುತ್ತಿರುವ ಕಾರಣ ಅವರನ್ನು ಖಾಲಿ ಮಾಡಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎಂದು ಅವರು ಸಾಕ್ಷಿ ಹೇಳಲು ಬಂದಿಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಮೈಸೂರು